ಮೂಲ ದಾವಾ ಸಂಖ್ಯೆ. 81/2022 ಪಿ ಡಬ್ಲ್ಯೂ 1

(ದಿನಾಂಕ 16-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಕೆ ಜೆ ವಕೀಲರಿಂದಃ-

ಈ ದಾವೆಯನ್ನು ನಾನು ಭಾಷಾರವರ ಮೇಲೆ ದಾಖಲಿಸಿದ್ದೇನೆ. ನಾನು ಒಟ್ಟು 7 ಜನರ ಮೇಲೆ ದಾವೆ ದಾಖಲಿಸಿದ್ದೇನೆ ಅವರೆಲ್ಲರ ಹೆಸರು ನನಗೆ ಹೇಳಲು ಬರುವುದಿಲ್ಲ. ನಾನು ಯಡ್ರಮ್ಮನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನನಗೆ ಗಿಡ್ಡಪ್ಪ ತಂದೆಯಾಗಬೇಕು. ನಮ್ಮ ತಂದೆಯವರ ಹೆಸರಿಗೆ ದಾಖಲಿರುವ ಜಮೀನುಗಳ ಪಹಣಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಮ್ಮ ಅಜ್ಜ ಅಮ್ಮನ ಹೆಸರಿನಲ್ಲಿ ಜಮೀನು ದಾಖಲಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ.

ದಾವಾ ಜಮೀನು ಸರ್ವೆ ನಂಬರ್, ಅದರ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ ನಾನು ಶಾಲೆಯನ್ನು ಕಲಿತಿಲ್ಲ. ನನ್ನ ತಂದೆ ಗಿಡ್ಡಪ್ಪ ಇವರಿಗೆ ನಾವು ಒಟ್ಟು 6 ಜನ ಮಕ್ಕಳು. ನಮ್ಮ ತಂದೆಯವರು ಈಗ 30 ವರ್ಷದ ಹಿಂದೆ ಮರಣ ಹೊಂದಿದ್ದಾರೆ ನನಗೆ ದಿನಾಂಕ ಹೇಳಲು ಬರುವುದಿಲ್ಲ. ನನ್ನ ಮದುವೆ ನಮ್ಮ ತಂದೆಯವರು ಜೀವಂತ ಇರುವ ಸಮಯದಲ್ಲಿ ಆಗಿರುತ್ತದೆ. ನನ್ನ ಮತ್ತು ನನ್ನ ಸಹೋದರಿಯರ ಮದುವೆಗಳ ಖರ್ಚು ವೆಚ್ಚಗಳನ್ನು ನಮ್ಮ ತಂದೆಯವರೇ ನಿಭಾಯಿಸಿರುತ್ತಾರೆಂದರೆ ಸರಿ. ಈಗ ದಾವಾಸ್ತಿಗಳು ಯಾರ ಹೆಸರಿನಲ್ಲಿ ದಾಖಲಿವೆ ಅಂತಾ ನನಗೆ ಹೇಳಲು ಬರುವುದಿಲ್ಲ. ದಾವಾ 1 ಮತ್ತು 2 ನೇ ಸ್ವತ್ತಿಗೆ ಸಂಬಂಧಿಸಿದಂತೆ ಮಾತ್ರ ನಾನು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಉಳಿದ ಆಸ್ತಿಗಳಿಗೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದರೆ ಸರಿ. ಉಳಿದ ಆಸ್ತಿಗಳು ಯಾರ ಹೆಸರಿನಲ್ಲಿವೆ ಅದನ್ನು ಯಾರು ಸಾಗು ಮಾಡುತ್ತಾರೆನ್ನುವುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಬಸವರಾಜ ಈಗ 4 ವರ್ಷದ ಹಿಂದೆ ಮರಣ ಹೊಂದಿದ್ದಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ